ತಾರೀಖು 19ನೆ ಸೆಪ್ಟಂಬರ್ 1903.

ನಂ. ರೆ. 961, ಸ್ರ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೀಷ್ನ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧ ಪಡಿಸುವದೇನಂದರೆ, ಇದರಡೀ ಕಂಡ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ, ತುಮಕೂರು ತಾಲ್ಲೂಕು ಗೂಳೂರು ಹೋಬಳಿಯಲ್ಲಿರುವ ಚಿಕ್ಕನಿಗಪ್ಪನ ಪಾಳ್ಯದ ಗ್ರಾಮದಲ್ಲಿ ಮನೆಗಳನ್ನು ಕಟ್ಟುವ ಬಗ್ಗೆ ಬೇಕಾಗಿರುತ್ತದೆ. ಮತ್ತು ಮೇಲ್ಕಂಡ ರೆಗ್ಯುಲೇಷನಿನ 3 (c) ಮ 7ನೆ ಸೆಕ್ಷನ್‌ಗಳನುಸರಿಸಿ ತುಮಕೂರು ಡಿಸ್ಟ್ರಿಕ್ಟಿನ ಡಿಪ್ಯುಟಿ ಕಮಿಷನರವರು ಸದರೀ ಜಮೀನನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ಡಿಸ್ಟ್ರಿಕ್ಟು.	ತಾಲ್ಲೂಕಿನ.	ಹೋಬಳಿ.	ಗ್ರಾಮ.	ಹಿಡುವಳಿದಾರನ ಹೆಸರು.	ಸರ್ವೆ ನಂ.	ಜಮೀನಿನ ವಿಸ್ತೀರ್ಣ.	ಬೇಕಾಗಿರುವ ಜಮೀನಿನ ವಿಸ್ತೀರ್ಣ.	ಚಕ್ಕುಬಂದಿ.			
								ಉತ್ತರ.	ಪೂರ್ವ.	ದಕ್ಷಿಣ.	ಪಶ್ಚಿಮ.
ತುಮಕೂರು	ತುಮಕೂರು	ಗೂಳೂರು	ಚಿಕ್ಕನಿಗಪ್ಪನ ಪಾಳ್ಯ	ಲಕ್ಷ ...	24	ಎ. ಗು. 3 13 ಖುಷ್ಕಿ	ಎ. ಗು. 1 20	ಸರ್ವೆ ನಂ. 25 ಮತ್ತು ಸರ್ವೆ ನಂ. 21	ಸರ್ವೆ ನಂ. 21 ಮತ್ತು ಸರ್ವೆ ನಂ. 22	ಕೆರೆ ಪುಂಜಿ ಸರ್ವೆ ನಂ. 16	ಸರ್ವೆ ನಂ. 22

ತಾರೀಖು 19ನೆ ಸೆಪ್ಟಂಬರ್ 1903.

ನಂ. ರೆ. 975, ಮ್ಯುನಿಸಿಪಲರಾದ ಮೆ॥ ಜೆ. ಹೋಲ್ಟ್‌ಯವರು ತಮ್ಮ ಕೆಲಸಗಳೊಂದಿಗೆ, ಅಸಿಸ್ಟೆಂಟ್ ಕಮ್ಮಿಷನರಾದ ಮೆ॥ ಸಿ. ನಾರಾಯಣ ರಾಯರು ಇತರ ಕೆಲಸದಲ್ಲಿರುವ ಕಾಲದಲ್ಲಿ, ಶಿವಮೊಗ್ಗ ಡಿಸ್ಟ್ರಿಕ್ಟ ಟ್ರೆಜರಿ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 21ನೆ ಸೆಪ್ಟಂಬರ್ 1903.

ನಂ. ರೆ. 987—ರೆ. ಫೈ. 77—1897-8, ಡೆಪ್ಯುಟಿ ಕಮಿಷನರಾದ ಮೆ॥ ಬಿ. ಕೆ. ವೆಂಕಟವರದಯ್ಯಂಗಾರ್ರಿಗೆ 3 ತಿಂಗಳುಗಳ ಪ್ರಿವಿಲೇಜ್ ರಜಾದೊಂದಿಗೆ 1903ನೆ ಜೂ॥ 11ನೆ ಮಾರ್ಕುಂ ರೆ. 4531ನೆ ನಂಬರ್ ಗವರ್ನಮೆಂಟಿನ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ 3 ತಿಂಗಳುಗಳ ಫರ್ಲೋ ರಜಾ ಇನ್ನೂ 1 ತಿಂಗಳು 13 ದಿನಗಳು ಜಾಸ್ತಿ ಮಾಡಲ್ಪಟ್ಟಿರುತ್ತದೆ.

ತಾರೀಖು 23ನೆ ಸೆಪ್ಟಂಬರ್ 1903.

ನಂ. ರೆ. 992—ರೆ. ಫೈ. 9-1903, ಮೈಸೂರು ಸರ್ವಿಸ್ ರೆಗ್ಯುಲೇಷ್ನಗಳ 188ನೆ ಆರ್ಟಿಕಲ್ ಅನುಸರಿಸಿ ಮೈಸೂರು ಶೀಮೆಯ ಸರ್ವೆ ಮತ್ತು ಸೆಟಲಮೆಂಟ್ ಕಮಿಷನರಾದ ಕರ್ನಲ್ ಜೆ. ಪಿ. ಗ್ಯಾಲ್ಟಿಂಟ್ ಯವರಿಗೆ 1903ನೆ ಸೆಪ್ಟಂಬರ್ 21ನೆ ತಾರೀಖಿ ನಾರಭ್ಯ ಯಾ ಅವರು ಉಪಯೋಗಿಸಿಕೊಳ್ಳಬಹುದಾದ ತಾರೀಖಿನ ಲಾಗಾಯಿತು ನಾಲ್ಕು ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,
ಹೆಚ್. ವಿ. ನಂಜುಂಡೈಯ್ಯ,
ಜನರಲ್ ಮ ರವಿನ್ಯೂ ಇಲಾಖೆಗಳ ಗವರ್ನಮೆಂಟ್ ಸೆಕ್ರೆಟೆರಿ.

ಪಬ್ಲಿಕ್ ವರ್ಕ್ಸ.

ಇಸ್ತಿಹಾರ್ನಾಮಾ.

ತಾರೀಖು 19ನೆ ಸೆಪ್ಟಂಬರ್ 1903.

ನಂ. 1063—5238, ಮೈಸೂರ ಪ್ಯಾಲೇಸ್ ಡಿವೀಜನಿಗೆ ಕೇರಿದ ಹಂಗಾಮಿ ಸಬ್ ಅಸಿಸ್ಟೆಂಟ್ ಇಂಜನಿಯರ್ ಮೆ॥ ವಿ. ರಂಗಾಚಾರ್ರಿಗೆ ಮಾಹೆ ಮೆಜಕೂರು 16ನೆ ತಾರೀಖಿನಾರಭ್ಯ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಒಂದು ತಿಂಗಳ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,
ಡಬ್ಲ್ಯೂ. ಮೆಕ್ ಹರ್ಬೆ,
ಪಬ್ಲಿಕ್ ವರ್ಕ್ಸ ಇಲಾಖೆಯ ಮೈಸೂರ ಗವರ್ನಮೆಂಟ್ ಸೆಕ್ರೆಟೆರಿ.